**<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ,</u>**

**<u>ಟಿ. ನರಸೀಪುರ.</u>**

**<u>ಸಿ. ಸಿ ನಂ. 532/2025</u>**

| | |
|---|---|
| ಪಿರ್ಯಾದಿದಾರರು : | ಸರ್ಕಾರ ಪರವಾಗಿ ಬನ್ನೂರು ಪೊಲೀಸ್ ಠಾಣೆ |
| | ವಿರುದ್ಧ |
| ಆರೋಪಿತರು : | ಸಂಜಯ @ ಸಂಚಯ ಕುಮಾರ್ ಹೆಚ್.ಹೆಚ್,<br>ಬಿನ್ ಹೊಂಬೇಗೌಡ ಹೆಚ್.ಎಸ್, 26 ವರ್ಷ,<br>ವಾಸಃ ಹನುಮಾನಳು ಗ್ರಾಮ,<br>ಬನ್ನೂರು ಹೋಬಳಿ, ಟಿ.ನರಸೀಪುರ ತಾಲ್ಲೂಕು,<br>ಮೈಸೂರು ಜಿಲ್ಲೆ. |

**<u>ದೋಷಾರೋಪಣೆ</u>**

**ಶ್ರೀ ಸಚಿನ್ ಹೆಚ್.ಆರ್, ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ಟಿ.ನರಸೀಪುರ, ಆದ ನಾನು ಮೇಲ್ಕಂಡ ಆರೋಪಿತರಾದ ನಿಮ್ಮ ಮೇಲೆ ಕೆಳಕಂಡಂತೆ ದೋಷಾರೋಪಣೆಯನ್ನು ಮಾಡುತ್ತೇನೆ.**

<u>ನಿಮ್ಮ ಮೇಲೆ ಹೊರಿಸಲಾದ ದೋಷಾರೋಪಣೆ ಏನೆಂದರೆಃ</u>

ಬನ್ನೂರು ಪೊಲೀಸ್ ಠಾಣಾ ಸರಹದ್ದು ಹನುಮಾನಾಳು ಚಾಸಾ–1ರವರು 2020ನೇ ಇಸವಿಯಲ್ಲಿ ಆರೋಪಿಯಾದ ನಿಮ್ಮನ್ನು ಒತ್ತಾಯದ ಮೇರೆಗೆ ಪ್ರೀತಿಸಲು ಒಪ್ಪಿದ್ದು, ಇದನ್ನು ನೀವು ದುರುಪಯೋಗ ಪಡಿಸಿಕೊಂಡು, 2021ನೇ ಇಸವಿಯ ಡಿಸೆಂಬರ್ ತಿಂಗಳಲ್ಲಿ ಚಾಸಾ–1ರವರನ್ನು ಪುಸಲಾಯಿಸಿಕೊಂಡು ಮೇಗಳಾಪುರದ ಬಳಿ ಪಿಲ್ಲಹಳ್ಳಿ ಗ್ರಾಮದ ವ್ಯಾಪ್ತಿಯ ಒಂದು ತೋಟದ ಮನೆಗೆ ಕರೆದುಕೊಂಡು ಹೋಗಿ ಮಧ್ಯಾಹ್ನ 1.00 ಗಂಟೆ ಸಮಯದಲ್ಲಿ ಚಾಸಾ–1ರವರ ಜೊತೆ ದೈಹಿಕ ಸಂಪರ್ಕ ನಡೆಸಿ ಆರೋಪಿಯಾದ ನೀವು ನಿಮ್ಮ ಮೊಬೈಲ್ ನಲ್ಲಿ ಚಾಸಾ–1ರವರ ಜೊತೆಯಿರುವ ಅಶ್ಲೀಲ ಫೋಟೊಗಳನ್ನು ತೆಗೆದುಕೊಂಡು, ಅವುಗಳನ್ನು ಜಾಲತಾಣಗಳಲ್ಲಿ ಹಾಕುವುದಾಗಿ ಹೆದರಿಸಿದ್ದು, ಆ ಮೂಲಕ ಆರೋಪಿಯಾದ ನೀವು ಭಾರತಿಯ ದಂಡ ಸಂಹಿತೆಯ ಕಲಂ 354(ಸಿ)ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಕೊನೆಯದಾಗ ಮೇಲೆ ಹೇಳಿರುವ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ನಿಮ್ಮ ಮೊಬೈಲ್ ನಲ್ಲಿ ಚಾಸಾ–1 ರವರ ಜೊತೆಯಿರುವ ಅಶ್ಲೀಲ ಫೋಟೊಗಳನ್ನು ತೆಗೆದುಕೊಂಡು, ಅವುಗಳನ್ನು ಜಾಲತಾಣಗಳಲ್ಲಿ ಹಾಕುವುದಾಗಿ ಹೆದರಿಸಿ ಪದೇ ಪದೇ ಸದರಿ ತೋಟದ ಮನೆಗೆ ಚಾಸಾ–1 ರವರನ್ನು ಬರುವಂತೆ ಒತ್ತಾಯ ಮಾಡಿ ಅದೇ ರೀತಿ ತನ್ನ ಸ್ನೇಹಿತರ ಜೊತೆ ಸಹಕರಿಸುವಂತೆ ಪೀಡಿಸುತ್ತಿದ್ದು, ಇದರಿಂದ ಬೇಸರಗೊಂಡ ಚಾಸಾ–1 ರವರು ಆರೋಪಿಯಾದ ನಿಮ್ಮಿಂದ ದೂರವಾಗಿದ್ದು, ನಂತರ ದಿನಗಳಲ್ಲಿ ಚಾಸಾ–1 ರವರ ಮದುವೆಯು ಚಾಸಾ–2 ರವರ ಜೊತೆ ದಿನಾಂಕ 09.12.2022 ರಂದು ಮದುವೆಯ ನಿಶ್ಚಯವಾಗಿದ್ದು, ಮದುವೆಯನ್ನು ನಿಲ್ಲಿಸುವ ಉದ್ದೇಶದಿಂದ ಆರೋಪಿಯಾದ ನೀವು ನಿಮ್ಮ ಮೊಬೈಲ್ ನಲ್ಲಿ ಈ ಹಿಂದೆ ಚಾಸಾ–1 ರವರ ಜೊತೆ ತೆಗೆದುಕೊಂಡಿದ್ದ ಫೋಟೋಗಳನ್ನು ವಾಟ್ಸಪ್ ಮೂಲಕ ಚಾಸಾ–2 ರವರಿಗೆ ಕಳುಹಿಸಿದ್ದು, ಆ ಮೂಲಕ Information Technology Act 2008 ಕಲಂ 67, 67(A)ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಈ ಮೇಲಿನ ಆರೋಪದ ವಿಚಾರಣೆಯು ನಿಮ್ಮ ವಿರುದ್ಧ ಈ ನ್ಯಾಯಾಲಯದಲ್ಲಿ ನಡೆಯತಕ್ಕದೆಂದು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ **17.06.2026.**

**(ಸಚಿನ್ ಹೆಚ್.ಆರ್)**
**ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾದಂ.**
**ಟಿ. ನರಸೀಪುರ.**

## ಆರೋಪಿತರ ಹೇಳಿಕೆ

ಪ್ರಶ್ನೆ-1 ಈಗ ಓದಿ ಹೇಳಿದ ಆರೋಪಣೆಯನ್ನು ಅರ್ಥ ಮಾಡಿಕೊಂಡಿರಾ ?

ಉತ್ತರಃ

ಪ್ರಶ್ನೆ-2 ಮೇಲೆ ಹೇಳಿದ ಆರೋಪಣೆಯನ್ನು ಒಪ್ಪಿಕೊಳ್ಳುವಿರಾ ? ಅಥವಾ ವಿಚಾರಣೆ ಆಗಬೇಕೆನ್ನುವಿರಾ?

ಉತ್ತರಃ

**(ಮೇಲ್ಕಂಡ ಆರೋಪಣೆಯನ್ನು ಆರೋಪಿತರಿಗೆ ತಿಳಿದ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಬರೆದು ಕೊಂಡಿದ್ದು ಅವು ಸರಿಯಾಗಿರುತ್ತದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.)**

**(ಸಚಿನ್ ಹೆಚ್.ಆರ್)**
**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ**
**ಟಿ.ನರಸೀಪುರ.**

**ಆರೋಪಿತರ ಸಹಿ**